ಬಗ್ಗೆ ತನಿಖೆ ಮಾಡೋಣ. ಆದರೆ, ಇದು ಪ್ರತ್ಯೇಕ ಪ್ರಶ್ನೆಯಾಗಿದೆ.

ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಬಸವ ಜನ್ಮಭೂಮಿಯ ಪ್ರಾಧಿಕಾರ ರಚನೆ.

65(892)

ಶ್ರೀ ಜೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ): ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬಾಗೇವಾಡಿ ತಾಲ್ಲೂಕು ಇಂಗಳೇಶ್ವರದಲ್ಲಿ ರಾಜ್ಯ ಸರ್ಕಾರವು ಬಸವ ಜನ್ಮಭೂಮಿ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಯೋಜಿಸಿದೆಯೇ?

ಆ) ಯೋಜಿಸಿದ್ದಲ್ಲಿ ಸದರಿ ಪ್ರಾಧಿಕಾರ ಯಾವಾಗಿನಿಂದ ಕಾರ್ಯಾರಂಭ ಮಾಡುವುದು.

ಇ) ಈ ಪ್ರಾಧಿಕಾರ ಹಾಲಿ ಅಸ್ತಿತ್ವದಲ್ಲಿಯೇ ಇದ್ದಲ್ಲಿ ಇದಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು?

ಈ) ಸದರಿ ಅಭಿವೃದ್ಧಿ ಪ್ರಾಧಿಕಾರಕ್ಕೂ ಹಾಗೂ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೂ ವ್ಯತ್ಯಾಸವಿದೆಯೇ ಇದ್ದಲ್ಲಿ ಅವು ಯಾವುವು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಬಸವನ ಬಾಗೇವಾಡಿ, ಬಸವ ಕಲ್ಯಾಣ ಕ್ಷೇತ್ರ ಹಾಗೂ ಕೂಡಲ ಸಂಗಮ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಕೂಡಲ ಸಂಗಮ ಕ್ಷೇತ್ರ ಎಂಬುದರ ಬದಲಿಗೆ ಬಸವ ಸಂಗಮಕ್ಷೇತ್ರವೆಂದು ಪರಿವರ್ತಿಸಲು ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 94ಕ್ಕೆ ಸೂಕ್ತ ತಿದ್ದುಪಡಿ ಮಾಡಲು ಪರಿಶೀಲಿಸಲಾಗುತ್ತಿದೆ.

ಆ) ಕೂಡಲಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 94ಕ್ಕೆ ತಿದ್ದುಪಡಿ ಮಾಡಿದ ನಂತರ ಕಾರ್ಯಾರಂಭ ಮಾಡಲಾಗುವುದು.

ಇ) ಪ್ರಾಧಿಕಾರ ಅಸ್ತಿತ್ವದಲ್ಲಿ ಇಲ್ಲದೆ ಇರುವುದರಿಂದ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಸಚಿವರು 'ಬಸವನ ಬಾಗೇವಾಡಿ, ಬಸವ ಕಲ್ಯಾಣ ಕ್ಷೇತ್ರ ಹಾಗೂ ಕೂಡಲ ಸಂಗಮ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಕೂಡಲ ಸಂಗಮ ಕ್ಷೇತ್ರ ಎಂಬುದರ ಬದಲಿಗೆ ಬಸವ ಸಂಗಮ ಕ್ಷೇತ್ರವೆಂದು ಪರಿವರ್ತಿಸಲು ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 94ಕ್ಕೆ ಸೂಕ್ತ ತಿದ್ದುಪಡಿ ಮಾಡಲು ಪರಿಶೀಲಿಸಲಾಗುತ್ತಿದೆಂದು ತಿಳಿಸಿದ್ದಾರೆ. ನಾನು ಹಿಂದಿನ ಅಧಿವೇಶನದ ಸಂದರ್ಭದಲ್ಲಿ ಕೇಳಿದಂಥ ಇದೇ ಪ್ರಶ್ನೆಗೆ ಇದೇ ರೀತಿಯ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದರು. ಆದುದರಿಂದ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, 12ನೇ ಶತಮಾನದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದ ಬಸವಣ್ಣನವರ ಹುಟ್ಟೂರಾದ ಇಂಗಳೇಶ್ವರ, ಬಸವನ ಬಾಗೇವಾಡಿ ಮತ್ತು ಮುನಿಗಳ ಬಳಿ ವಿದ್ಯಾಭ್ಯಾಸ ಮಾಡಿರುವ ಊರಾದ ಬೀಳಗಿ ತಾಲ್ಲೂಕಿನ ಚಿಕ್ಕ ಸಂಗಮ, ಅವರ ಕಾರ್ಯಕ್ಷೇತ್ರವಾದ ಬೀದರ್ ಜಿಲ್ಲೆಯ ಬಸವ ಕಲ್ಯಾಣ, ಐಕ್ಯ ಸ್ಥಳವಾದ ಕೂಡಲ ಸಂಗಮ, ಕೂಡಲ ಸಂಗಮವನ್ನು ಈಗಾಗಲೇ ಅಭಿವೃದ್ಧಿಗೊಳಿಸಿರುವುದು ಬಹಳ ಮೆಚ್ಚತಕ್ಕಂಥ ಕೆಲಸವಾಗಿದೆ. ಅದೇ ರೀತಿ ಬಸವಣ್ಣನವರ ಜೀವನ ಚರಿತ್ರೆಯಲ್ಲಿ ಉಲ್ಲೇಖಿತವಾಗಿರುವ ಈ ಮೇಲ್ಕಂಡ ಎಲ್ಲಾ ಸ್ಥಳಗಳನ್ನೂ ಸೇರಿಸಿ ಸುಮಾರು ಮುನ್ನೂರು ಕಿಲೋಮೀಟರ್‌ಗಳಷ್ಟು ವ್ಯಾಪ್ತಿಯಲ್ಲಿ ಬರುವ ಈ ಪ್ರದೇಶಗಳನ್ನು ಸೇರಿಸಿ ಒಂದು ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಬೇಕು. ಇದನ್ನು ಸರ್ಕಾರ ಯಾವಾಗ ಮಾಡುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೆ, ಬಸವನ ಬಾಗೇವಾಡಿ, ಬಸವ ಕಲ್ಯಾಣ, ಕೂಡಲ ಸಂಗಮ, ಇವು ಬಸವಣ್ಣನವರ ಹುಟ್ಟಿದ ಊರು, ಅವರ ಕಾರ್ಯಕ್ಷೇತ್ರ ಹಾಗೂ ಅವರ ಐಕ್ಯ ಕ್ಷೇತ್ರಗಳಾಗಿದ್ದು, ಇದರ ಜೊತೆಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಚಿಕ್ಕ ಸಂಗಮ, ಇವಿಷ್ಟನ್ನೂ ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಬಸವ ಸಂಗಮ ಕ್ಷೇತ್ರದ ಕಾರ್ಯಕ್ರಮದಡಿ ತೆಗೆದುಕೊಳ್ಳಬೇಕೆಂಬ ಒಂದು ಪ್ರಸ್ತಾವವನ್ನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದು, ಪ್ರಸ್ತಾವನೆಗೆ ಅನುಮೋದನೆ ಕೊಟ್ಟಿರುತ್ತಾರೆಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಮತ್ತು ಕಂದಾಯ ಇಲಾಖೆಯಿಂದಲೂ ಅನುಮೋದನೆ ದೊರಕಿರುತ್ತದೆ. ಅಲ್ಲದೆ, ಕಾನೂನು ಇಲಾಖೆಗೆ ಅನುಮೋದನೆಗಾಗಿ ನಾವು ಕಳುಹಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಪರಿಶೀಲನೆಯಲ್ಲಿರುವುದರಿಂದ ಇದನ್ನೆಲ್ಲವನ್ನೂ ಸಮಗ್ರವಾಗಿ ಪರಿಶೀಲಿಸಿ ಈ ಮೂರು ಕ್ಷೇತ್ರಗಳ ಜೊತೆಗೆ ಮಾನ್ಯ ಸದಸ್ಯರು ತಿಳಿಸಿರುವ ಚಿಕ್ಕ ಸಂಗಮ ಕ್ಷೇತ್ರ ಹಾಗೂ ಇನ್ನಿತರ ಪ್ರದೇಶಗಳನ್ನು ಬಸವ ಸಂಗಮ ಕ್ಷೇತ್ರದ ಕಾರ್ಯಕ್ರಮದಡಿ ತರುವ ನಿಟ್ಟಿನಲ್ಲಿ ಯೋಜನೆ

ಸಿದ್ಧಪಡಿಸಿ ಅನುಮೋದನೆ ಪಡೆದು ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನ ನಡೆಸುತ್ತೇವೆಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಅಧ್ಯಕ್ಷರು: ಬಸವಣ್ಣನವರ ಹುಟ್ಟೂರು ಈ ಕ್ಷೇತ್ರಗಳ ಪಕ್ಕದಲ್ಲಿಯೇ ಇರುವುದರಿಂದ ಇದನ್ನೂ ಸಹ ಕಾರ್ಯಕ್ರಮದಡಿ ಸೇರಿಸಿಕೊಳ್ಳಬೇಕೆಂದು ಕೋರಿ ನನ್ನ ಹತ್ತಿರ ಒಂದು ರೆಪ್ರಸೆಂಟೇಶನ್ ಬಂದಿತ್ತು.

ಶ್ರೀಮತಿ ರಾಣಿ ಸತೀಶ್: ಬಸವಣ್ಣನವರ ತಾಯಿ ಮನೆಯಾದ ಇಂಗಳೇಶ್ವರ ಇರುವ ಸ್ಥಳವನ್ನೂ ಸಹ ಸೇರಿಸಬೇಕೆಂಬ ಪ್ರಸ್ತಾವವನ್ನು ಅವರು ನನಗೂ ತಂದು ಕೊಟ್ಟಿದ್ದಾರೆ. ಇದನ್ನೆಲ್ಲವನ್ನೂ ಗಮನಿಸಿ ಬಸವ ಸಂಗಮ ಕ್ಷೇತ್ರದ ವ್ಯಾಪ್ತಿಯಡಿ ತಂದು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಯೋಜನೆಯನ್ನು ಪರಿಶೀಲಿಸಿ ಸಿದ್ಧಪಡಿಸತಕ್ಕಂಥ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ.

ಶ್ರೀ ಹೆಚ್.ಸಿ.ಬಸವರಾಜು: ಬಸವ ಜನ್ಮಭೂಮಿ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ಎಷ್ಟು ಅವಧಿಯೊಳಗೆ ರಚನೆ ಮಾಡುತ್ತದೆ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಸರ್ಕಾರದಿಂದ ನಾವು ಅಪೇಕ್ಷಿಸುತ್ತೇವೆ.

ಶ್ರೀಮತಿ ರಾಣಿ ಸತೀಶ್: ಈಗಾಗಲೇ ನಾನು ತಿಳಿಸಿರುವಂತೆ, ಇದು ಕಾನೂನು ಇಲಾಖೆಯ ಪರಿಶೀಲನೆಯಲ್ಲಿರುವುದರಿಂದ, ಅಲ್ಲಿಂದ ಬಂದ ಬಳಿಕ ಆದಷ್ಟು ಶೀಘ್ರವಾಗಿ ಆ ಕುರಿತು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಸಿ.ಬಸವರಾಜು: ಆದಷ್ಟು ಶೀಘ್ರವಾಗಿ ಎಂದರೆ ಎಷ್ಟು ದಿವಸ? The Government should come out with a definite period within which it will be done. ಮಾನ್ಯ ಮಂತ್ರಿಗಳು ಹಾರಿಕೆ ಉತ್ತರ ಕೊಡುತ್ತಿದ್ದಾರೆ. ಆದಷ್ಟು ಶೀಘ್ರವಾಗಿ ಎಂದರೆ ಒಂದು ತಿಂಗಳು ಆಗಬಹುದು, ಒಂದು ವರ್ಷವೂ ಆಗಬಹುದು.

ಶ್ರೀ ಗುಂಡಪ್ಪ ವಕೀಲ: ಆದಷ್ಟು ಶೀಘ್ರವಾಗಿ ಎಂದರೆ ಆರು ತಿಂಗಳೇ? ಮೂರು ತಿಂಗಳೇ? ಎರಡು ತಿಂಗಳೇ? ಎಷ್ಟೆಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಹೆಚ್.ಸಿ.ಬಸವರಾಜು: ಒಂದು ಅಂದಾಜಿನಲ್ಲಿ ಇಷ್ಟು ದಿವಸಗಳಲ್ಲಿ ಬಸವ ಜನ್ಮಭೂಮಿ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡುತ್ತೇವೆಂದು ಹೇಳಲಿ.

MR.SPEAKER: I cannot compel the minister to answer like this or like that. ಕಾನೂನು ಇಲಾಖೆಯಲ್ಲ ಆ ಕುರಿತ ಕಡತ

ಇದೆಯೆಂದು ಮಾನ್ಯ ಸಚಿವರು ಹೇಳಿದ್ದಾರಲ್ಲ. ಅಲ್ಲಿಂದ ಕಡತ ವಾಪಸ್ಸು ಬರಬೇಕಲ್ಲ. ಬಂದ ನಂತರ ಸಚಿವರು ಕ್ರಮ ತೆಗೆದುಕೊಳ್ಳುತ್ತಾರೆ.

ನಬಾರ್ಡ್ ಕಾಮಗಾರಿ :

68(890)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಲೋಕೋಪಯೋಗಿ ಇಲಾಖೆಯಿಂದ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ನಬಾರ್ಡ್ ಸಾಲ ಯೋಜನೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು ವಿಧಾನಸಭಾ ಕ್ಷೇತ್ರದಲ್ಲಿ ಮಂಜೂರಾದ ಕಾಮಗಾರಿಗಳು ಯಾವುವು?

2. ಯಾವ ಸಾಲಿನಲ್ಲಿ ಮಂಜೂರಾಗಿದೆ.

3. ಇವುಗಳಿಗೆ ಮಂಜೂರಾದ ಅಂದಾಜು ಮೊತ್ತವೆಷ್ಟು(ಕಾಮಗಾರಿವಾರು ವಿವರ ನೀಡುವುದು)

4. ಇವುಗಳು ಯಾವ ವರ್ಷಗಳಲ್ಲಿ ಪೂರ್ಣಗೊಳ್ಳಬೇಕಾಗಿತ್ತು.

5. ಆಯಾಯಾ ವರ್ಷಗಳಲ್ಲಿ ಪೂರ್ಣಗೊಳಿಸದೇ ಇರುವ ಬಗ್ಗೆ ಗುತ್ತಿಗೆದಾರರ ಮೇಲೆ ಇಲಾಖೆವತಿಯಿಂದ ಕೈಗೊಂಡ ಕ್ರಮಗಳೇನು (ವರ್ಷವಾರು:ಕಾಮಗಾರಿವಾರು ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಲೋಕೋಪಯೋಗಿ ಇಲಾಖೆಯಡಿ 6 ರಸ್ತೆ ಕಾಮಗಾರಿಗಳು ಹಾಗೂ ಎಂ ಎ ಡಿ ಬಿ ಅಡಿ 10 ರಸ್ತೆ ಕಾಮಗಾರಿಗಳು ಮಂಜೂರಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

2. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

3. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

4. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.